ಓ.ಎಸ್ ನಂ. 173/2022

ಡಿ. ಡಬ್ಲ್ಯೂಃ 1

(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಪಿ ಜಿ ಪಿ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 11-04-2025 ರಂದು ಬೊಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಪಿ ಬಿ ಟಿ ನ್ಯಾಯವಾದಿರವರಿಂದಃ**

ಗೋವಿಂದ ಶಾಂಬಾ ಬಾಂದೇಕರ ಇವರ ಮನೆಗೆ ತಾಗಿಕೊಂಡು ನನ್ನ ತಂದೆಯವರು ಮನೆ ಕಟ್ಟಿಕೊಂಡು ಸಂಸಾರ ಮಾಡಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿ . ಸಾಕ್ಷಿಯು ಸ್ವತಃ ಅವರೆಲ್ಲರೂ ಅಣ್ಣತಮ್ಮಂದಿರು ಇರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಗೋವಿಂದ ಶಾಂಭಾ ಬಾಂದೇಕರ ಇವರ ಮನೆಯು ವಾದಿಯ ಮನೆಯಿಂದ 100 ಮೀಟರ ದೂರದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ನಾನು ಮತ್ತು ನನ್ನ ಸಹೋೀದರ ಸಹೋದರಿಯರು ನನ್ನ ತಂದೆಯವರು ನಿರ್ಮಾಣ ಮಾಡಿದ ಮನೆಯಲ್ಲೇ ಹುಟ್ಟಿ ಬೆಳೆದಿರುತ್ತೇವೆ ಎಂದರೆ ಸರಿ. ನಂತರ ನನ್ನ ತಂದೆಯವರು ಸದರಿ ಮನೆಯನ್ನು ಕೆಡವಿ ದೇವತಿ ದೇವಸ್ಥಾನದ ಸಮೀಪ ಹೊಸ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ದೇವತಿ ದೇವಸ್ಥಾನದ ಸಮೀಪ ನಿರ್ಮಾಣ ಮಾಡಿದ ಮನೆ ಒಂದು ಕಿಮೀ ದೂರದಲ್ಲಿರುತ್ತದೆ ಎಂದರೆ ಸರಿಯಲ್ಲ , 5 ನಿ.ದಲ್ಲಿ ಅಲ್ಲಿ ಹೋಗಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸ್ತುತ ನನ್ನ ತಾಯಿಯು ದೇವಸ್ಥಾನದ ಸಮೀಪ ಇರುವ ಹೊಸ ಮನೆಯಲ್ಲಿ ಇರುತ್ತಾರೆ. ಸದರಿ ಮನೆಗೆ ಹೋಗಲು ಬರಲು ಸರಿಯಾದ ದಾರಿ ಇರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಸ್ವತಃ ಪಕ್ಕದವರು ದಾರಿಯನ್ನು ಬಿಟ್ಟುಕೊಡಲು ಸಿದ್ಧರಿರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಮಗ ಗೋವಾದಲ್ಲಿ ಇರುತ್ತಾನೆಂದರೆ ಸರಿ. ಅವನು ಗೋವಾದಲ್ಲಿ ತನ್ನ ಹೆಂಡತಿ ಮಕ್ಕಳ ಜೊತೆ ಸಂಸಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅವರು ಗೋವಾದಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಸಾಕಷ್ಟು ವರ್ಷ ನನ್ನ ಮಗನ ಜೊತೆ ಗೋವಾದಲ್ಲಿ ಇದ್ದೇನೆ ಎಂದರೆ ಸರಿ. ನಾನು ಸುಮಾರು 5 ವರ್ಷಗಳ ಕಾಲ ಗೋವಾದಲ್ಲಿ ಇದ್ದೇನೆ. ಗೋವಾದಿಂದ ಬಂದ ನಂತರ ಶಿರವಾಡದ ಗಣಪತಿ ನಗರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆವು ಎಂದರೆ ಸರಿ.

ಗಣಪತಿ ನಗರದ ಬಾಡಿಗೆ ಮನೆಯಿಂದ ನಾವು ಪ್ರಕಾಶ ಗುನಗಿ ಇವರ ಬಾಡಿಗೆ ಮನೆಯಲ್ಲಿದ್ದೆವು ಎಂದರೆ ಸರಿ. ಸದರಿ ಪ್ರಕಾಶ ಗುನಗಿ ಇವರ ಮನೆಯ ನಂತರ ಅಂಥೋನಿ ಇವರ ಮನೆಯಲ್ಲಿ ಬಾಡಿಗೆಗೆ ಇದ್ದೆವು ಎಂದರೆ ಸರಿಯಲ್ಲ. ಪ್ರಸ್ತುತ ನಾನು ಶಿರವಾಡದ ಬಿಶಪ್ ಹೌಸನಲ್ಲಿ ಬಾಡಿಗೆಗೆ ಇರುತ್ತೇನೆ. ನ್ಯಾಯಾಲಯದ ಪ್ರಶ್ನೆಗೆ ಸಾಕ್ಷಿಯು ಸುಮಾರು 4 - 5 ವರ್ಷಗಳಿಂದ ಈಚೆಗೆ ನಾವು ಬೇರೆ ಬೇರೆ ಬಾಡಿಗೆ ಮನೆಯಲ್ಲಿ ವಾಸಮಾಡುತ್ತಿದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಬಹಳ ವರ್ಷಗಳಿಂದಲೇ ಬೇರೆ ಬೇರೆ ಕಡೆಗಳಲ್ಲಿ ಬಾಡಿಗೆಗೆ ಇರುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನನ್ನ ಮನೆ ಮುರಿದ ನಂತರ ನಾವು ಬಾಡಿಗೆ ಮನೆಯಲ್ಲಿ ವಾಸ ಮಾಡಲು ಪ್ರಾರಂಭಿಸಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಆಸ್ತಿಗಳು ಬಹಳಷ್ಟು ವರ್ಷಗಳ ಹಿಂದೆ ಮಾರಾಟವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 2-3 ವರ್ಷಗಳ ಹಿಂದೆ ಮಾರಾಟವಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯವರ ಪೂರ್ವದಿಕ್ಕಿನಲ್ಲಿರುವ ಜಮೀನಿನಲ್ಲಿ ಖಾಲಿ ಜಾಗ ಇದ್ದಿದ್ದರಿಂದ ಅಲ್ಲಿ ನಾವು ಮನೆಯನ್ನು ಬಹಳ ವರ್ಷಗಳ ಹಿಂದೆ ಕಟ್ಟಿದ್ದೆವು ಎಂದು ಸಾಕ್ಷಿ ಉತ್ತರಿಸುತ್ತಾರೆ. ವಾದಿಯರ ಜಮೀನು ಪೂರ್ವದಿಂದ ಪಶ್ಚಿಮದ ಕಡೆಗೆ ಎಷ್ಟು ಉದ್ದ ಇರುತ್ತದೆಂದು ನನಗೆ ಹೇಳಲುಬರುವುದಿಲ್ಲಾ. ಉತ್ತರದಿಂದ ದಕ್ಷಿಣದ ಕಡೆಗೆ ವಾದಿಯ ಜಮೀನಿನ ಉದ್ದಳತೆ ನನಗೆ ಗೊತ್ತಿರುವುದಿಲ್ಲಾ. ಸಾಕ್ಷಿಯು ಸ್ವತಃ ಉತ್ತರದಿಂದ ದಕ್ಷಿಣದ ಕಡೆಗೆ ಸ್ವಲ್ಪ ದೂರ ಇರುತ್ತದೆಂದು ನುಡಿಯುತ್ತಾರೆ.

ವಾದಿಯರ ಜಮೀನಿನ ಉದ್ದಳತೆ ಮತ್ತು ಕ್ಷೇತ್ರ ನನಗೆ ಗೊತ್ತಿರುವುದಿಲ್ಲಾ. ವಾದಿಯ ಜಮೀನಿನ ಪೂರ್ವ ಪಶ್ಚಿಮ ದಿಕ್ಕಿನ ಉದ್ದಳತೆ ನನಗೆ ಹೇಳಲು ಬರುವುದಿಲ್ಲಾ. ಸದರಿ ಜಮಿನಿನ ಉತ್ತರದಿಂದ ದಕ್ಕಿಣದ ಕಡೆಗಿನ ಉದ್ದಳತೆ ನನಗೆ ಹೇಳು ಬರುವುದಿಲ್ಲಾ. ಅನಂತ ಶಾಂಬಾ ಬಾಂದೇಕರ ಇವರಿಗೆ 4 ಜನ ಗಂಡುಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳಿರುತ್ತಾರೆ. ಸದರಿ 4 ಜನ ಗಂಡುಮಕ್ಕಳು ಸರ್ವೇ ನಂ.156/2ಡ ರಲ್ಲಿ ಮನೆ ಕಟ್ಟಿಕೊಂಡು ಅದರಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಮನೆಯನ್ನು ಮಾತ್ರ ಅನಂತ ಶಾಂಬಾ ಬಾಂದೇಕರ ಇವರು ನಿರ್ಮಾಣ ಮಾಡಿರುತ್ತಾರೆಂದು ನುಡಿಯುತ್ತಾರೆ.

ಗೋವಿಂದ ಶಾಂಬಾ ಬಾಂದೇಕರ ಇವರಿಗೆ 3 ಜನ ಗಂಡುಮಕ್ಕಳು ಮತ್ತು 2 ಜನ ಹೆಣ್ಣು ಮಕ್ಕಳಿರುತ್ತಾರೆ. ಸದರಿ ಗೋವಿಂದ ಶಾಂಬಾ ಬಾಂದೇಕರ ಇವರ ಗಂಡು ಮಕ್ಕಳು ಸರ್ವೇ ನಂ.156/2 ಡ ರಲ್ಲಿ ಮನೆ ಕಟ್ಟಿಕೊಂಡು ಅದರಲ್ಲಿ ವಾಸಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಮನೆಯನ್ನು ಮೊದಲೇ ನಿರ್ಮಾಣ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಪಿ.9 ನ್ನು ನಾನು ಹೇಳಿಸಿ ಬರೆಸಿರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಮಗ ಹೇಳಿ ಬರೆಸಿರುತ್ತಾನೆ ಎಂದು ನುಡಿಯುತ್ತಾರೆ. ನಿಪಿ.9 ರಲ್ಲಿ ಏನು ಬರೆದಿರುತ್ತದೆ ಎಂಬುದು ಗೊತ್ತಿಲ್ಲಾ. ನಾನು ಹಾಜರು ಪಡಿಸಿದ ಭಾವಚಿತ್ರಗಳು ದಾವಾ ಆಸ್ತಿಗೆ ಸಂಬಂಧಪಟ್ಟದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ.2 ಯಾವ ವರ್ಷಕ್ಕೆ ಸಂಬಂಧಪಟ್ಟದ್ದೆಂದು ನನಗೆ ಗೊತ್ತಿಲ್ಲಾ. ನಿಪಿ.2 ನ್ನು ನನ್ನ ಮಗ ಹಾಜರು ಪಡಿಸಿರುತ್ತಾರೆ. ನಿಪಿ.2 ರಶೀದಿಯಲ್ಲಿ ಅದು ಯಾವ ಮನೆಗೆ ಸಂಬಂಧಪಟ್ಟದ್ದು ಎಂದು ನಮೂದು ಇರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ಮನೆಗೆ ಸಂಬಂಧಪಟ್ಟದ್ದು ಎಂದುನುಡಿಯುತ್ತಾರೆ. ನಿಪಿ.2 ನ್ನು ನನ್ನ ಮಗನೇ ಸೃಷ್ಟಿಸಿ ಹಾಜರು ಪಡಿಸಿರುತ್ತಾನೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನನ್ನ ಮಗ ಗೋವಾದಲ್ಲಿರುತ್ತಾನೆಂದು ಸಾಕ್ಷ್ಯ ನುಡಿಯುತ್ತಾರೆ. ಹಳೆಯ ಮನೆಯ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿಸಿ ಬರೆಸಿರುತ್ತೇನೆಂದರೆ ಸರಿಯಲ್ಲ. ನಾನು ಆಧರಿಸುವಂತೆ ಯಾವುದೇ ಹಳೆಯ ಮನೆ ಅಸ್ತಿತ್ವದಲ್ಲಿರಲಿಲ್ಲಾ ಎಂದರೆ ಸರಿಯಲ್ಲ. ಸದರಿ ಹಳೆಯ ಮನೆಯು ವಾದಿಯ ತನ್ನ ಮನೆಯನ್ನು ನಿರ್ಮಾಣ ಮಾಡುವ ಪೂರ್ವದಲ್ಲೇ ಇತ್ತು ಎಂದರೆ ಸರಿಯಲ್ಲ. ವಾದಿಯು ನಮ್ಮ ಜಮೀನನ್ನು ಅತಿಕ್ರಮಣ ಮಾಡಿರುತ್ತಾನೆಂದು ನನ್ನ ತಕರಾರು ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿಸಿ ಬರೆಸಿರುತ್ತೇನೆಂದರೆ ಸರಿಯಲ್ಲ. ವಾದಿಯು ಆಟೋ ಚಾಲಕ ಎಂದರೆ ಸರಿ. ಸಾಕ್ಷಿ ಸ್ವತಃ ವಾದಿಯು ವ್ಯಾಪಾರವನ್ನು ಸಹ ಮಾಡುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯು ಶ್ರೀಮಂತ ವ್ಯಕ್ತಿ ಎಂದು ನಾನು ಸುಳ್ಳು ಸಾಕ್ಷ್ಯ ಬರೆಸಿರುತ್ತೇನೆಂದರೆ ಸರಿಯಲ್ಲ. ವಾದಿಯ ಜಮೀನಿನಲ್ಲಿ ನಾನು ಹೊಸ ಮನೆ ನಿರ್ಮಾಣ ಮಾಡಿ ಅತಿಕ್ರಮಣ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಓ.ಎಸ್ ನಂ. 173/2022

ಡಿ. ಡಬ್ಲ್ಯೂಃ 1

ಮರು ವಿಚಾರಣೆಃ - ಇಲ್ಲ -

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಕಾರವಾರ